ಅಧ್ಯಕ್ಷರು : ಮಾನ್ಯ ಖಾದರ್‌ರವರ ಪ್ರಶ್ನೆಯ ಮೇಲೆ ಬಹುತೇಕ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿರುವುದರಿಂದ ಇದನ್ನು ಅರ್ಧ ಗಂಟೆ ಕಾಲಾವಕಾಶದ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಆನಂತರ ಇದರ ಬಗ್ಗೆ ಎಲ್ಲರೂ ಚರ್ಚೆ ಮಾಡಿ.

ಮೈಸೂರು ಮಿನರಲ್ ಸಂಸ್ಥೆಯಲ್ಲಿ ನ್ಯಾಯಾಲಯದಿಂದ ವ್ಯಾಜ್ಯವನ್ನು ಹಿಂಪಡೆದಿರುವ ಬಗ್ಗೆ

21 (44) ಡಾ: ಹೆಚ್.ಸಿ.ಮಹದೇವಪ್ಪ (ಟಿ.ನರಸೀಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರದೀಪ್ ಎಕ್ಸ್‌ಪೋರ್ಟ್ ಮತ್ತು ವೆಲ್ಲೀಷ್ ಸಂಸ್ಥೆಯು ಎಂಎಂಎಲ್ ಸಂಸ್ಥೆಯಲ್ಲಿ ಕಬ್ಬಿಣ ಅದಿರಿನ ಮಾರಾಟ ಬೆಲೆಯ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದನ್ನು ಕೇಂದ್ರ ಕಛೇರಿಯ ಕೆಲವು ಅಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರ ಅನುಮತಿಯಿಲ್ಲದೆ ಉಚ್ಚ ನ್ಯಾಯಾಲಯದಿಂದ ವ್ಯಾಜ್ಯವನ್ನು ಹಿಂಪಡೆದಿರುವುದು ನಿಜವಲ್ಲವೇ;

ಆ) ಸಂಸ್ಥೆಗೆ ಕೋಟ್ಯಾಂತರ ರೂ.ಗಳ ನಷ್ಟ ಉಂಟು ಮಾಡಿರುವ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಹಿಂದಿನ ವ್ಯವಸ್ಥಾಪಕರು ಆದೇಶಿಸಿದ್ದರೂ ಸಹ ಯಾವುದೇ ಶಿಸ್ತು ಕ್ರಮ ಕೈಗೊಳ್ಳದಿರಲು ಕಾರಣವೇನು (ಸಮಗ್ರ ಮಾಹಿತಿಯನ್ನು ಒದಗಿಸುವುದು).

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಮೆ:ಪ್ರದೀಪ್ ಎಕ್ಸ್‌ಪೋರ್ಟ್ ಮತ್ತು ಇತರೆ ವಾಣಿಜ್ಯ ಸಂಸ್ಥೆಗಳಾದ ಮೆ:ಸ್ಕಂದ ಎಂಟರ್‌ಪ್ರೈಸಸ್, ಸುವಿ ಗ್ರಾನೈಟ್ಸ್, ಇಂಡಿಯನ್ ರಾಕ್ ಹಾಗೂ ವಿಕ್ಟರಿ ಎಕ್ಸ್‌ಪೋರ್ಟ್‌ರವರಿಗೆ ಒಟ್ಟು 2,05,000 ಮೆಟ್ರಿಕ್ ಟನ್ ಕಬ್ಬಿಣದ ಅದಿರಿನ ಪುಡಿಯನ್ನು ಸಂಸ್ಥೆಯು ಹಂಚಿಕೆ ಮಾಡಿದ್ದು, ಈ ಪೈಕಿ ಸರಬರಾಜು ಮಾಡದೆ ಬಾಕಿ ಇದ್ದ 1,20,391 ಮೆಟ್ರಿಕ್ ಟನ್ ಅದಿರನ್ನು ಸರಬರಾಜು ಮಾಡುವಂತೆ ಸಂಸ್ಥೆಗೆ ನಿರ್ದೇಶಿಸುವಂತೆ ಕೋರಿ ಖರೀದಿದಾರರು ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 17461/2005ನ್ನು ದಾಖಲಿಸಿದ್ದು, ಈ ರಿಟ್ ಅರ್ಜಿಯಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: 12.08.2005ರಂದು ನೀಡಿದ್ದ ಆದೇಶದಲ್ಲಿ, ಸದರಿ ಸಂಸ್ಥೆಗಳಿಗೆ 175000 ಮೆಟ್ರಿಕ್ ಟನ್ ಅದಿರನ್ನು ಸಂಸ್ಥೆಗಳಿಗೆ

ರೂ. 577/– ದರದಲ್ಲಿ ನೀಡುವಂತೆ ಆದೇಶಿಸಿದ್ದು, ಈ ಆದೇಶವು ಎಂ.ಎಂ.ಎಲ್. ಸಂಸ್ಥೆಯ ಹಿತಾಸಕ್ತಿಗೆ ವಿರುದ್ಧವಾಗಿದ್ದರಿಂದ, ಸಂಸ್ಥೆಯು ಮಾನ್ಯ ನ್ಯಾಯಾಲಯದಲ್ಲಿ ಪರಿಶೀಲನಾ ಅರ್ಜಿಯನ್ನು ದಾಖಲಿಸಿದ್ದಿತು. ಈ ಪರಿಶೀಲನಾ ಅರ್ಜಿಯಲ್ಲಿ ವಾದ–ವಿವಾದದ ಸಂದರ್ಭದಲ್ಲಿ, ಎಂ.ಎಂ.ಎಲ್. ಸಂಸ್ಥೆಗೆ ಇನ್ನೂ ಪ್ರತಿಕೂಲವಾದ ಆದೇಶ ಬರುವ ಸಂಭವವಿದ್ದುದರಿಂದ, ಸದರಿ ಪರಿಶೀಲನಾ ಅರ್ಜಿಯನ್ನು ಸಂಸ್ಥೆಯ ಪರ ವಾದ ಮಂಡಿಸಿದ ಹಿರಿಯ ನ್ಯಾಯವಾದಿಗಳು ಹಿಂದಕ್ಕೆ ಪಡೆದಿರುತ್ತಾರೆ. ನಂತರ, ಈ ಕ್ರಮವನ್ನು ಸಂಸ್ಥೆಯ 264ನೇ ಆಡಳಿತ ಮಂಡಳಿಯ ಸಭೆಯಲ್ಲಿ ಸ್ಥಿರೀಕರಿಸಲಾಗಿದೆ. ಹಾಗಾಗಿ, ಸಂಸ್ಥೆಯ ಅಧಿಕಾರಿಗಳು ಅನುಮತಿ ಇಲ್ಲದೆ ನ್ಯಾಯಾಲಯದಿಂದ ವ್ಯಾಜ್ಯವನ್ನು ಹಿಂದಕ್ಕೆ ಪಡೆದಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಆ)

1. ಸದರಿ ಪ್ರಕರಣದಲ್ಲಿ, ಒಟ್ಟು 2,95,391 ಮೆ. ಟನ್ ಅದಿರನ್ನು ಸಂಧಾನದ ಪತ್ರದ ದಿನಾಂಕ: 29.07.2005 ರನ್ವಯ ನೀಡಬೇಕೆಂದು ಇದೇ ಏಕ ಸದಸ್ಯ ಪೀಠವು ರಿಟ್ ಪಿಟಿಷನ್ ನಂ. 17461/2005 ರಲ್ಲಿ ಮತ್ತೊಂದು ಮಾರ್ಪಡಿಸಿದ ಆದೇಶವನ್ನು ದಿನಾಂಕ: 18.01.2008 ರಂದು ಹೊರಡಿಸಿತು.
2. ಈ ಮಾರ್ಪಡಿಸಿದ ಆದೇಶವನ್ನು ನಿಗಮದ ವತಿಯಿಂದ ಪ್ರಶ್ನಿಸಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ರಿಟ್ ಅಪೀಲ್ ಸಂಖ್ಯೆ W.A. No. 342/2008 ಅನ್ನು ಸಲ್ಲಿಸಲಾಗಿ ಸದರಿ ರಿಟ್ ಅಪೀಲ್‌ನ್ನು ಎಂಎಂಎಲ್ ಪರವಾಗಿ ಎತ್ತಿ ಹಿಡಿದ ನ್ಯಾಯಾಲಯವು ರಿಟ್ ಪಿಟಿಷನ್ ನಂ. 17461/2005 ರಲ್ಲಿ ಹೊರಡಿಸಲಾದ ಹಿಂದಿನ ಆದೇಶವನ್ನು ವಜಾಗೊಳಿಸಿ ದಿನಾಂಕ: 24.04.2009 ರಂದು ತೀರ್ಪು ನೀಡಿದೆ.
3. ಈ ವಿಭಾಗೀಯ ಪೀಠದ ತೀರ್ಪಿನ ವಿರುದ್ಧ ಮೇಲ್ಕಂಡ ಸಂಸ್ಥೆಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಸ್ಪೆಷಲ್ ಲೀವ್ ಪಿಟಿಷನ್ ಎಸ್‌ಎಲ್‌ಸಿ ನಂ2058/2009ನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಎಂಎಂಎಲ್ ಪರವಾಗಿ ಸೂಕ್ತವಾದ ಮಂಡಿಸಲು ಕ್ರಮ ಕೈಗೊಳ್ಳಲಾಗಿದೆ.

4. ಈ ಪ್ರಕರಣದಲ್ಲಿ ಮತ್ತು ಇನ್ನಿತರ 6 ಅದಿರು ವಹಿವಾಟು, ಉತ್ಪಾದನೆ, ಕಾಮಗಾರಿ ಪ್ರಕರಣಗಳಲ್ಲಿ ಶ್ರೀ ಬಿ.ಟಿ.ಲಕ್ಷ್ಮಣ್, ಹಿಂದಿನ ಮುಖ್ಯ ಪ್ರಧಾನ ವ್ಯವಸ್ಥಾಪಕರು ನಿಗಮದ ಆರ್ಥಿಕ ಹಿತದೃಷ್ಟಿಗೆ ಧಕ್ಕೆ ಉಂಟಾಗುವಂತೆ ವರ್ತಿಸಿದ್ದು, ಶ್ರೀಯುತರ ವಿರುದ್ಧ ಶಿಸ್ತು ಕ್ರಮಗಳನ್ನು ಜರುಗಿಸಲಾಗಿದೆ. ಶ್ರೀಯುತರನ್ನು ದಿನಾಂಕ 07.04.2006ರಂದು ಅಮಾನತ್ತು ಗೊಳಿಸಲಾಗಿದ್ದು, ಇವರು ದಿನಾಂಕ: 30.06.2007 ರಂದು ಸೇವಾ ನಿವೃತ್ತಿ ತಲುಪಿರುತ್ತಾರೆ. ಈ ಅಧಿಕಾರಿಯು ತಮ್ಮ ವಿರುದ್ಧ ಹೂಡಲಾದ ಶಿಸ್ತು ಪ್ರಕರಣಗಳಲ್ಲಿ ಮೂರು ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ರಿಟ್ ಪಿಟಿಷನ್ ನಂ. 14915/2008ರಲ್ಲಿ ತಡೆಯಾಜ್ಞೆಯನ್ನು ಪಡೆದಿರುತ್ತಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಹಿ ಮಾಡಿದ್ದಾರೆ. I have nothing against any officer or officers. But the way the officers conducted the business caused crores of rupees loss to the Government and also Government Companies. ಸರ್ಕಾರದವರು ಎಂಎಂಎಲ್ ನಿಂದ ಪ್ರದೀಪ್ ಎಕ್ಸ್‌ಪೋರ್ಟ್‌ರವರಿಗೆ ಒಂದು ಲಕ್ಷ ಟನ್ ಕಬ್ಬಿಣದ ಅದಿರನ್ನು ಕೊಡಬೇಕೆಂದು ಆಗಿತ್ತು. ಇದರಲ್ಲಿ 69 ಸಾವಿರ ಟನ್ ಕಬ್ಬಿಣ ಅದಿರನ್ನು ಅವರು ತೆಗೆದುಕೊಂಡಿದ್ದು, ಅವಧಿ ಮುಗಿದ ಮೇಲೆ ಉಳಿದ 31 ಸಾವಿರ ಟನ್ ಕಬ್ಬಿಣದ ಅದಿರನ್ನು ಲಿಫ್ಟ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಅವರು ಕೇಳಿದ್ದರು.

ಇದರಲ್ಲಿ ಇವರು MMTC ದರಕ್ಕಿಂತ ಅತ್ಯಂತ ಕಡಿಮೆ ದರದಲ್ಲಿ ರೂ.577 ಗಳ ಇವರು ಕೊಟ್ಟಿದ್ದಾರೆ. MMTC ದರ ರೂ.2500 ಗಳು. ಆದರೆ ಇವರು ಕೊಟ್ಟಿರುವುದು 557 ರೂ.ಗಳು. ಇದರಿಂದ ಸರ್ಕಾರಕ್ಕೆ ಎಷ್ಟು ಲಾಸ್ ಆಯಿತು. ಇವರು ಹೇಳಿರುವುದು ಮೆ: ಪ್ರದೀಪ್ ಎಕ್ಸ್‌ಪೋರ್ಟ್ ಕಂಪನಿ ಯವರು ಕೋರ್ಟಿಗೆ ಹೋದರು. ಕೋರ್ಟಿನಲ್ಲಿ ವಾದ ನಡೆಯುತ್ತಾ ನಡೆಯುತ್ತಾ ಕೋರ್ಟಿನಲ್ಲಿ ಅವರಿಗೆ ಅನುಕೂಲವಾಗುತ್ತದೆನ್ನುವ ಕಾರಣಕ್ಕಾಗಿ ನಾವು ವಾಪಸ್ಸು ತೆಗೆದುಕೊಂಡು ಬಿಟ್ಟಿದ್ದೇವೆಂದು ಹೇಳುತ್ತಾರೆ, ಎಷ್ಟು

ಬುದ್ಧಿವಂತಿಕೆಯಿಂದ ಲಾಯರ್‌ಗಳು ಮತ್ತು ನಮ್ಮ ಲೀಗಲ್ ಆಫೀಸರ್‌ಗಳು ವಾದ ಮಾಡುತ್ತಾ ಮಾಡುತ್ತಾ ಕಂಡು ಬಂದಿರುವುದು ನಮ್ಮ ವಿರುದ್ಧವಾಗುತ್ತದೆ ಇದನ್ನು ವಾಪಸ್ಸು ತೆಗೆದುಕೊಂಡು ಬಿಡೋಣವೆಂದು. ಇದರಲ್ಲಿ ಕೋಟ್ಯಾಂತರ ರೂ.ಗಳ ನಷ್ಟವಾಗಿರುವುದು ಇದರ ಬಗ್ಗೆ ನಾನು ಹೇಳಿ ಬಿಡುತ್ತೇನೆ. ಹೇಗೆ irresponsible officers have conducted themselves in causing loss of crores of rupees to the Government. ಇಲ್ಲಿ ಮಹೇಂದ್ರಜೈನ್‌ರವರು ಎಂ.ಡಿ. ಆಗಿದ್ದರು. ಮೆ:ಪ್ರದೀಪ್ ಎಕ್ಸ್‌ಪೋರ್ಟ್ ಕಡತ ಸಂಖ್ಯೆ: MML:MKT:5P:IOF: 2005-06 Marketing File No. ಪುಟ–31 ಕಂಡಿಕೆ 109 ರಲ್ಲಿ ಕರೆಕ್ಟಾಗಿ ತಮಗೆ ಹೇಳುತ್ತಿದ್ದೇನೆ. ಇಲ್ಲಿ ಅವರು ಏನು ಹೇಳಿದ್ದಾರೆ. MML ಸಂಸ್ಥೆಯ ಕಾನೂನು ಅಧಿಕಾರಿ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದು ಕಂಪನಿಯ ಹಿತದೃಷ್ಟಿಯನ್ನು ಕಡೆಗಣಿಸಿ ಸಂಸ್ಥೆಯ ಕೋಟ್ಯಾಂತರ ರೂ.ಗಳಿಗೆ ಕಾರಣರಾಗಿದ್ದಾರೆ. He is no less than an MD. ಈ ಕಂಡಿಕೆ ಎಲ್ಲವನ್ನು ಹೇಳಿದ್ದೇನೆ. ಮತ್ತು ಅವರು ಏನು ಹೇಳಿದ್ದಾರೆ. ಇದಕ್ಕೆ ಇವರ Law officer, General Manager and Legal Official ಇವರೆಲ್ಲಾ ಸೇರಿಕೊಂಡು M.D. ಯವರು ಪ್ರವಾಸದಲ್ಲಿದ್ದಾಗ Court ನಲ್ಲಿ ನಡೆಯುತ್ತಿರುವಂಥ ಘಟನೆ anticipate ಮಾಡಿ ಹಿಂದಕ್ಕೆ ತೆಗೆದುಕೊಂಡು MMTC ದರಕ್ಕಿಂತ ತೀರಾ ಕಡಿಮೆ ದರಕ್ಕೆ ಕೊಟ್ಟು ಕೋಟ್ಯಾಂತರ ರೂ.ಗಳ ನಷ್ಟವನ್ನು ಮಾಡಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು the then MD ರವರು ಬರೆದಿರುವುದಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳದೆ ಮಾಡಿದ್ದಾರೆ, ಇದರಿಂದ ದೊಡ್ಡ ನಷ್ಟ ಉಂಟಾಗಿದೆ, ಸರ್ಕಾರ ಅವರ ವಿರುದ್ಧ ಕ್ರಮ ತೆಗೆದುಕೊಂಡು ಇದರ ನಷ್ಟವನ್ನು ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಡಾ: ಮಹಾದೇವಪ್ಪನವರು ಪ್ರಶ್ನೆಯನ್ನು ಕೇಳಿದ್ದರು. ಆ ಪ್ರಶ್ನೆಗೆ ಇವತ್ತು ಅವರಿಗೆ ಉತ್ತರವನ್ನು ಕೊಟ್ಟಿರುತ್ತೇವೆ. ಅವರು detail ಆಗಿ ಹೋಗುತ್ತಿದ್ದಾರೆ ಪ್ರಶ್ನೋತ್ತರ ವೇಳೆಯಲ್ಲಿ ನಾವು ಅವರಿಗೆ

ಉತ್ತರವನ್ನು ಕೊಟ್ಟಿರುತ್ತೇವೆ. ನಾವು ಮೊದಲನೆಯದಾಗಿ ಹೇಳಿರುವುದೇನೆಂದರೆ ನಾವು ಆ ಕೇಸ್‌ನ್ನು withdraw ಮಾಡಿರುವುದರಲ್ಲಿ ಯಾವುದೇ ದುರುದ್ದೇಶ ಇರಲಿಲ್ಲವೆನ್ನುವುದು ಸರ್ಕಾರದ ನಿಲುವು. ನಾನು ಕೂಡ ಪರಿಶೀಲಿಸಿದ್ದೇನೆ. ತಾವು ಏನು ಹಾಗೆ ಮಾಡಿರಬಹುದೇ ಎಂದು ಹೇಳಿದರೆ, ನಾನು ಕೂಡ ಒಬ್ಬ advocate ಆಗಿ ಕೆಲವು ಪ್ರಸಂಗಗಳು ಬರುತ್ತವೆ. ಯಾವ ಪ್ರಸಂಗದಲ್ಲಿ withdraw ಮಾಡಬೇಕೆನ್ನುವುದು it is the discretion of the plaintiff or the petitioner. ನಾವು ಸದುದ್ದೇಶದಿಂದ ಆವತ್ತು withdraw ಮಾಡಿರುತ್ತೇವೆ. ಇದರ ಜೊತೆಗೆ ಹಿಂದಿನ ಒಬ್ಬ General Manager ಲಕ್ಷ್ಮಣ ಎನ್ನುವವರು ತಪ್ಪು ಮಾಡಿರುವುದರಿಂದ ಅವರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಡಾ: ಹೆಚ್.ಸಿ.ಮಹಾದೇವಪ್ಪ : Already ಅವರು retire ಆಗಿರುತ್ತಾರೆ. ನಿಮ್ಮ MD ಯವರು ಏನು ಬರೆದಿದ್ದಾರೆ. ಆ ಪೈಲ್ ಇಲ್ಲಿದೆ ನೋಡಿ. ಏನೆಂದರೆ, Sri Laxman has already retired. ಸರ್ಕಾರಕ್ಕೆ ಕೋಟ್ಯಾಂತರ ರೂ.ಗಳ ನಷ್ಟವಾಗಿದೆ.

ಶ್ರೀ ಎಸ್.ಸುರೇಶ್‌ಕುಮಾರ್ : ಬೇರೆ ಸ್ವರೂಪದಲ್ಲಿ ಅವರು ಚರ್ಚೆಗೆ ತರಲಿ ಚರ್ಚೆ ಮಾಡೋಣ. ಈಗ ಅವರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿರುತ್ತೇವೆ. ನಾವು ಸದುದ್ದೇಶದಿಂದ ಅದನ್ನು withdraw ಮಾಡಿರುತ್ತೇವೆ.

ಡಾ: ಹೆಚ್.ಸಿ.ಮಹಾದೇವಪ್ಪ : ಇದು ಈ ಪ್ರಶ್ನೆಗೆ ನಿಮ್ಮ ಉತ್ತರ ಅಲ್ಲವೇ ಅಲ್ಲ. It is not at all answer to my question.

ಅಧ್ಯಕ್ಷರು : ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ ಚರ್ಚೆ ಮಾಡೋಣ. ಇದು ಪ್ರಶ್ನೋತ್ತರ ಅದನ್ನೆ ಮತ್ತೆ ಮತ್ತೆ ಕೇಳುವುದೆ?

ಡಾ: ಹೆಚ್.ಸಿ.ಮಹಾದೇವಪ್ಪ : ಬೇರೆ ರೂಪದಲ್ಲಿ ತರುತ್ತೇವೆಂದು ಹೇಳಿದ್ದಾರೆ. ರೂಲ್ 69 ದಲ್ಲಿ ಅವಕಾಶ ಮಾಡಿಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ : ನೀವು apply ಮಾಡಿ ಸರ್.

ರಾಜ್ಯದ ಜಿಲ್ಲೆಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ನೇಮಕ ಕುರಿತು

28 (11) ಶ್ರೀ ಮಂಜು. ವಿ. (ಅರಕಲಗೂಡು) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?